ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ 57)<br>ನಮೂನೆ ಸಂಖ್ಯೆ 4 |

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸೆಷನ್ಸ್ ಕೇಸ್ ನಂಬರ್ : 214/2021**

**ಫ್ರಾಸಾ- 5 ಚಾಸಾ- 5**

ಸಾಕ್ಷಿದಾರರ ಹೆಸರುಃ : ದೇವರಾಜು

ತಂದೆಯ ಹೆಸರುಃ : ತಿರುಮಲೇಗೌಡ

ವಯಸ್ಸುಃ : 63 ವರ್ಷ

ಉದ್ಯೋಗಃ : ವ್ಯವಸಾಯ

ವಾಸ : ಗಾಡೇನಹಳ್ಳಿ

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ:09-04-2026:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ**

ಈಗ ತೋರಿಸಿದ ದಾಖಲೆ ನಿಪಿ-2ರಲ್ಲಿರುವ ರುಜು ನನ್ನದೆ. ಸದರಿ ಸಹಿಯನ್ನು ಗಾಡೇನಹಳ್ಳಿ ಕ್ರಾಸ್ ಬಳಿ ಹಾಕಿರುತ್ತೇನೆ, ಅಲ್ಲಿಗೆ ಪೊಲೀಸರು ಬಂದಿದ್ದರು. ಏತಕ್ಕೆ ಬಂದಿದ್ದರೆಂದು ಗೊತ್ತಿಲ್ಲ. ಸದರಿ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ಅದರಲ್ಲಿ ಬರೆದ ವಿಚಾರ ಗೊತ್ತಿಲ್ಲ, ಪೊಲೀಸರು ಓದಿ ಹೇಳಿಲ್ಲ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ, ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ಹೇಳಿಕೆಗೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿಯುವುದು ಕಂಡುಬರುತ್ತದೆ, ಆದ್ದರಿಂದ ಮಾನ್ಯ ಅಭಿಯೋಜಕರ ಕೋರಿಕೆಯನ್ನು ಮನ್ನಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀಸವಾಲಿಗೆ ಒಳಪಡಿಸಲು ಅನುಮತಿ ನೀಡಲಾಗಿದೆ)

**ಪಾಟೀಸವಾಲುಃ ಸರ್ಕಾರದ ಪರ ಮಾನ್ಯ ಅಭಿಯೋಜಕರಿಂದಃ**

ಪೊಲೀಸರು ಸ್ಥಳಕ್ಕೆ ಬಂದ ಹಿಂದಿನ ದಿವಸ ಅಲ್ಲಿ ದರೋಡೆ ನಡೆಯಿತೆನ್ನುವ ವಿಚಾರವಾಗಿ ಅಲ್ಲಿಗೆ ಪೊಲೀಸರು ಬಂದಿದ್ದರು ಎಂದರೆ ಸರಿಯಲ್ಲ. ಚಾಸಾ-1 ರವರು ಪರಿಚಯವಿದೆ, ಅವರು ಸ್ಥ,ಳ ತೋರಿಸಿದರು ಎಂದರೆ ಸರಿ. ಅವರು ಅದೇ ಜಾಗದಲ್ಲಿ ತಮ್ಮ ದರೋಡೆ ನಡೆಯಿತೆಂದು ತೋರಿಸಿದರು ಎಂದರೆ ಸರಿಯಲ್ಲ. ಪೊಲೀಸರು ಅದೇ ಸ್ಥ,ಳದಲ್ಲಿ ನಡೆಸಿದ ಪಂಚನಾಮೆಗೆ ನಾನು ಅಲ್ಲಿ ಸಹಿ ಹಾಕಿದ್ದು

ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ**

ಇಲ್ಲವೆಂದು ಹೇಳುತ್ತಾರೆ

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಹಾಸನ.**